# ‘ನಾನ್‌ಸ್ಟಾಪ್’ ಮಹೇಶ್ ಭಟ್

ಕಳೆದ ವಾರ ನಿರ್ದೇಶಕ ಮಹೇಶ್ ಭಟ್‌ಗೆ 71 ತುಂಬಿತು. ಕೆಲಸದ ವಿಷಯದಲ್ಲಿ ಮಹೇಶ್‌ಗೆ ಮುಪ್ಪು ಯಾವುದೇ ಅಡ್ಡಿಯಾದಂತೆ ಕಾಣಿಸುತ್ತಿಲ್ಲ. ಆತ ನಿರ್ದೇಶಿಸುತ್ತಿರುವ, ಮುಂದಿನ ವರ್ಷ ತೆರೆಗೆ ಬರಲಿರುವ ‘ಸಡಕ್ 2’ಗೆ ಶೂಟಿಂಗ್ ಅಂದುಕೊಂಡಂತೆಯೇ ನಡೆದಿದೆ. ಸಂಜಯ್ ದತ್ ಭಾಗವಹಿಸಿದ ಐಟಂ ಸಾಂಗ್ ಚಿತ್ರೀಕರಣ ಈಗಾಗಲೆ ಮುಗಿದಿದೆ.



1991ರಲ್ಲಿ ಮೊದಲು ತೆರೆಗೆ ಬಂದ ‘ಸಡಕ್’ ಮಹೇಶ್ ಭಟ್‌ಗೆ ಅಪಾರ ಜನಪ್ರಿಯತೆ ತಂದುಕೊಟ್ಟಿತು. ಹಾಗೆ ನೋಡಿದರೆ ಮಹೇಶ್ ಭಟ್, ಗಂಭೀರ ಚಿತ್ರಗಳಿಂದಲೇ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ ನಿರ್ದೇಶಕ. ‘ಸಾರಾಂಶ್’, ‘ಅರ್ಥ್’, ಈತನ ಪ್ರತಿಭೆಯನ್ನು ಸಾರಿ ಹೇಳಿದ ಚಿತ್ರಗಳು. 90ರ ದಶಕದಲ್ಲಿ ಬಂದ ‘ಆಶಿಕಿ’ ಹಾಡುಗಳಿಂದಲೇ ಮನೆಮಾತಾಯಿತು. ನಾಮ್, ರಾಸ್ ಮುಂತಾಗಿ ಮಹೇಶ್ ಚಿತ್ರಗಳನ್ನು ಮುಗಿಬಿದ್ದು ನೋಡುವ ಪ್ರೇಕ್ಷಕ ವರ್ಗವೊಂದು ಸೃಷ್ಟಿ ಆಗಿದೆ. ಮೊದಲ ‘ಸಡಕ್’ನಲ್ಲಿ ಮಹೇಶ್ ಮಗಳು ಪೂಜಾ ಭಟ್ ಮತ್ತು ಸಂಜಯ್ ದತ್ ನಟಿಸಿದ್ದರು. ಈಗ ‘ಸಡಕ್ 2’ರಲ್ಲಿ ಅವರಿಬ್ಬರ ಜೊತೆಗೆ ಇನ್ನೊಬ್ಬ ಮಗಳು ಅಲಿಯಾ ಮತ್ತು ಆದಿತ್ಯ ರಾಯ್ ಕಪೂರ್ ಇದ್ದಾರೆ. ■



# ಮರಳಿ ಬಂದ ರಾಂಬೊ

‘ಸೂಪರ್ ಹೀರೊ’ ಸಿಲ್ವೆಸ್ಟರ್ ಸ್ಟಾಲನ್ ಮತ್ತೆ ಮರಳಿದ್ದಾನೆ– ‘ರಾಂಬೊ: ಲಾಸ್ಟ್ ಬ್ಲಡ್’ ಮೂಲಕ. ಸ್ಟಾಲನ್‌ಗೀಗ 73 ವರ್ಷ. ಕೈಯಲ್ಲಿ ಯಮಗಾತ್ರದ ಗನ್‌ಗಳನ್ನು ಹಿಡಿದು ವೈರಿಗಳನ್ನು ಉಡೀಸ್ ಮಾಡುವ ಆತನ ಪಾತ್ರ ಈ ಚಿತ್ರದಲ್ಲೂ ಮುಂದುವರಿದಿದೆ. 1982ರಲ್ಲಿ ‘ಫಸ್ಟ್ ಬ್ಲಡ್’ ಮೂಲಕ ಸ್ಟಾಲನ್ ಹಾಲಿವುಡ್ ಪ್ರವೇಶಿಸಿದಾಗ ಆ ಚಿತ್ರ ಜಗತ್ತಿನಾದ್ಯಂತ ಸೂಪರ್‌ಹಿಟ್ ಆದದ್ದು ಸುಳ್ಳಲ್ಲ. ಆ ಬಳಿಕ ‘ರಾಂಬೊ: ಫಸ್ಟ್ ಬ್ಲಡ್ 2’, ‘ರಾಂಬೊ 3’, ‘ರಾಂಬೊ’– ಹೀಗೆ ಸಾಲು ಸರಣಿ ಚಿತ್ರಗಳು ಬಂದವು. ಈಗ ಐದನೇ ಚಿತ್ರ ‘ಲಾಸ್ಟ್ ಬ್ಲಡ್’ ಬಂದಿದೆ. ಈ ಸೀರೀಸ್‌ನಲ್ಲಿ ಇದೇ ಕೊನೆಯ ಚಿತ್ರ ಎನ್ನುವುದತ ನಿಸ್ಸಂಶಯ ಎನ್ನುತ್ತಿದ್ದಾರೆ ಚಿತ್ರ ನೋಡಿದ ಪ್ರೇಕ್ಷಕರು. ■



# ಸೋನಂ ದುರದೃಷ್ಟ?

ಸೋನಂ ಕಪೂರ್ ಮತ್ತು ದುಲ್ಖರ್ ಸಲ್ಮಾನ್ ಜೋಡಿಯ ‘ದಿ ಜೋಯಾ ಫ್ಯಾಕ್ಟರ್’ ಚಿತ್ರ ಬಿಡುಗಡೆಗೆ ಮುನ್ನ ಚಿತ್ರಪ್ರೇಮಿಗಳಲ್ಲಿ ಸಾಕಷ್ಟು ಕುತೂಹಲ ಕೆರಳಿಸಿತ್ತು. ಆದರೆ ಬಿಡುಗಡೆಯ ಬಳಿಕ ಪ್ರೇಕ್ಷಕರಲ್ಲಿ ಅಂತಹ ಉತ್ಸಾಹವೇನೂ ಉಳಿದಂತೆ ಕಾಣುತ್ತಿಲ್ಲ. ಚಿತ್ರದ ಕಥೆ ಡಿಫರೆಂಟ್ ಆಗಿದ್ದರೂ, ಕಾಮಿಡಿಗೆ ಸಾಕಷ್ಟು ಅವಕಾಶಗಳಿದ್ದರೂ, ನಿರ್ದೇಶಕ ಅಭಿಷೇಕ್ ಶರ್ಮಾ ಚಿತ್ರವನ್ನು ದಡ ಮುಟ್ಟಿಸುವಲ್ಲಿ ವಿಫಲರಾಗಿದ್ದಾರೆ ಎನ್ನುವುದು ವಿಮರ್ಶಕರ ಮಾತು. ಚಿತ್ರದ ಯಶಸ್ಸಿಗೆ ದೊಡ್ಡ ತೊಡಕು ಎರಡೂವರೆ ಗಂಟೆಯ ದೀರ್ಘ ಅವಧಿ ಎನ್ನಲಾಗುತ್ತಿದೆ. ಸೋನಂ ಕುರಿತ ಚಿತ್ರಪ್ರೇಮಿಗಳ ಕುತೂಹಲ ಆಕೆಯ ಮದುವೆಯ ಬಳಿಕ ತಣಿದಿದೆ ಎಂಬ ವಾದವೂ ಇದೆ. ಕಾರಣ ಏನೇ ಇದ್ದರೂ ಸೋನಂ ಚಿತ್ರಬದುಕು ಅಷ್ಟೊಂದು ಚೆನ್ನಾಗಿಲ್ಲ. ಕಳೆದ ವರ್ಷ ಈಕೆ ನಟಿಸಿದ ‘ವೀರೇ ಡಿ ವೆಡಿಂಗ್’ ಮತ್ತು ‘ಸಂಜು’ ಎರಡೂ ಸೂಪರ್‌ಹಿಟ್ ಆಗಿದ್ದವು. ‘ವೀರೇ ಡಿ ವೆಡಿಂಗ್’ನಲ್ಲಿ ಕರೀನಾ ಸಹಿತ ಮೂವರು ನಾಯಕಿಯರಿದ್ದರು. ‘ಸಂಜು’ ಚಿತ್ರದಲ್ಲಿ ರಣಬೀರ್ ಪಾತ್ರವೇ ಹೈಲೈಟ್ ಆಗಿತ್ತು. ಹಾಗಾಗಿ ಎರಡೂ ಚಿತ್ರಗಳ ಯಶಸ್ಸಿನ ಪೂರ್ತಿ ಪಾಲು ಈಕೆಗೆ ಸಿಕ್ಕಿಲ್ಲ. ವರ್ಷದ ಆರಂಭದಲ್ಲಿ ಬಿಡುಗಡೆಯಾದ ‘ಏಕ್ ಲಡ್ಕೀ ಕೊ ದೇಖಾ...’ ದುಡ್ಡು ಮಾಡಲಿಲ್ಲ. ಈಗ ‘ದಿ ಜೋಯಾ ಫ್ಯಾಕ್ಟರ್’ ಬಾಕ್ಸಾಫೀಸ್‌ನಲ್ಲಿ ಗೆಲ್ಲದಿದ್ದರೆ ಈಕೆಯ ಚಿತ್ರಜೀವನ ಇಳಿಮುಖವಾದಂತೆಯೇ. ಈ ವರ್ಷದಲ್ಲಿ ಇನ್ನೊಂದು ಹೊಸ ಚಿತ್ರವೂ ಈಕೆಯ ಕೈಯಲ್ಲಿಲ್ಲ.

■ ಬಿಂದು